ಎರಡನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ
ಸಾಃ ಗೋಕಾಕ

ಸಿಸಿ ನಂಬರಃ **2131/2013**

ನಾನು, ರೂಪಾ ಮಟ್ಟಿ
ಬಿ.ಎಸ್.ಸಿ ಎಲ್ಎಲ್ ಎಮ್.,

ಎರಡನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮಎಫ್‌ಸಿ, ಗೋಕಾಕ.

ಆರೋಪಿತನ ಹೆಸರುಃ 1) ಮಹಾದೇವ ಗೌಡಪ್ಪಾ ನಾಯ್ಕ
ವಯಸ್ಸುಃ 48 ವರ್ಷ,
ಸಾಃ ಉದಗಟ್ಟಿ, ತಾಃ ಗೋಕಾಕ.

ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ ಏನೆಂದರೆ,

ದಿಃ 08-04-2013 ರಂದು ಸಾಯಂಕಾಲ 7-00 ಗಂಟೆಗೆ ಸುಮಾರಿಗೆ ಅಂಕಲಗಿ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಮುಸಲ್ಮಾರಿ ಗ್ರಾಮದ ಕನ್ನಡ ಶಾಲೆಯ ಹತ್ತಿರ ಆರೋಪಿತನಾದ ನೀನು ನಿನ್ನ ಸ್ವಂತ ಲಾಭಕ್ಕಾಗಿ ಸರಕಾರದ ಯಾವುದೇ ಅನುಮತಿ, ಪರವಾನಿಗೆ ಇಲ್ಲದೆ ಕಂಟ್ರಿ ಸರಾಯಿ ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವಾಗ ಸಿಕ್ಕ ಕಲಂ 32 ಕೆ ಇ ಆ್ಯಕ್ಟ ಅಡಿ ಅಪರಾಧ ಮಾಡಿರುವಿ.

ಎರಡನೇಯದಾಗಿ, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ನಿನ್ನ ಸ್ವಂತ ಲಾಭಕ್ಕಾಗಿ ಸರಕಾರದ ಯಾವುದೇ ಅನುಮತಿ, ಪರವಾನಿಗೆ ಇಲ್ಲದೆ ಯಾವುದೇ ಲೈಸನ್ಸ ಮತ್ತು ಪರ್ಮಿಟ ಇಲ್ಲದೆ ಕಂಟ್ರಿ ಸರಾಯಿ ಮಾರಾಟ ಮಾಡುತ್ತಿರುವಾಗ ಸಿಕ್ಕ ಕಲಂ 34 ಕೆ ಇ ಆ್ಯಕ್ಟ ಅಡಿ ಅಪರಾಧ ಮಾಡಿರುವಿ.

ಕೊನೆಯದಾಗಿ, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀನು ನಿನ್ನ ಸ್ವಂತ ಲಾಭಕ್ಕಾಗಿ ಸರಕಾರದ ಯಾವುದೇ ಅನುಮತಿ, ಪರವಾನಿಗೆ ಇಲ್ಲದೆ ಯಾವುದೇ ಲೈಸನ್ಸ ಮತ್ತು ಪರ್ಮಿಟ ಇಲ್ಲದೆ ಕಂಟ್ರಿ ಸರಾಯಿ ಸಂಗ್ರಹಿಸಿ, ಸದರಿ ಮಧ್ಯವನ್ನು ಸೇವಿಸಿದರೆ ಅದು ಮನುಷ್ಯನ ಪ್ರಾಣಕ್ಕೆ ಹಾನಿಕಾರಕ ಅಥವಾ ವಿಷಕಾರಿ ಅಂತಾ ಗೊತ್ತಿದ್ದರೂ ಸಹ ಕಂಟ್ರಿ ಸಾರಾಯಿಯನ್ನು ಸಾಗಾಟ ಮಾಡುತ್ತಿದ್ದು ಕಲಂ 273 ಭಾ ದಂ. ಸಂ. ಅಡಿ ಅಪರಾಧ ಮಾಡಿರುವಿ.

ಸದರೀ ಅಪರಾಧಗಳು ಇದೇ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವದರಿಂದ ಅವು ನನ್ನಿಂದ ವಿಚಾರಣೆ ಆಗುತ್ತವೆ ಎಂದು ತಿಳಿಯಬಯಸುತ್ತೇನೆ.

ಪ್ರಃ 1 - ನಿನಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉಃ

ಪ್ರಃ 2 ನೀನು ಗುನ್ನಾ ಕಬೂಲಿ ಆಗುವಿರೋ ಅಥವಾ ವಿಚಾರಣಾ ಆಗಬೇಕೋ?

ಉಃ

(ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವಳಿಂದ ಬಂದ ಉತ್ತರಗಳನ್ನು ನನ್ನ ಸ್ವಅಕ್ಷರಗಳಲ್ಲಿ ಬರೆದುಕೊಂಡೆ ಅಂತಾ ದೃಢಿಕರಿಸುತ್ತೇನೆ)

ದಿನಾಂಕಃ 15-09-2022 2 ನೇ ಹೆ.ದಿ.ನ್ಯಾ.ದಂ.,ಗೋಕಾಕ.